1) ನರಸಿಂಹರಾಜ ಕ್ಷೇತ್ರದ ನಾಯ್ಡು ನಗರ (ರಾಜೇಂದ್ರನಗರ) ಬಸ್ ನಿಲ್ದಾಣ ನಿರ್ಮಿಸಲು ಈಗಾಗಲೇ ಸ್ಥಳೀಯ ಅಧಿಕಾರಿಗಳು ನಿಲ್ದಾಣದ ನಕ್ಷೆ ಹಾಗೂ ಅಂದಾಜು ವೆಚ್ಚದ ಪಟ್ಟಿಯನ್ನು ಸರ್ಕಾರಕ್ಕೆ ಕಳುಹಿಸಲಾಗಿದ್ದುದು ನಿಜವಲ್ಲವೇ?

2) ಹಾಗಿದ್ದಲ್ಲಿ ಸರ್ಕಾರ ತೆಗೆದುಕೊಂಡ ಕ್ರಮವೇನು?

3) ಈ ನಿಲ್ದಾಣದ ಕಾಮಗಾರಿ ಯಾವಾಗ ಪ್ರಾರಂಭಿಸಲಾಗುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು) :

1) ನಿಜ.

2) ಈ ಕೆಲಸವು 1997-98ನೇ ಸಾಲಿನ ಆಯವ್ಯಯದಲ್ಲಿ ಸೇರ್ಪಡೆಯಾಗಿರಲಿಲ್ಲ. ಆದುದರಿಂದ ಕೆಲಸವನ್ನು ಕೈಗೊಂಡಿರುವುದಿಲ್ಲ

3) ಈ ಕೆಲಸವನ್ನು 1998-99ರ ಆಯವ್ಯಯದಲ್ಲಿ ಸೇರ್ಪಡೆ ಮಾಡಲು ಉದ್ದೇಶಿಸಲಾಗಿದೆ. ಆಯವ್ಯಯಕ್ಕೆ ಒಪ್ಪಿಗೆ ದೊರೆತ ನಂತರ ಸದರಿ ಯೋಜನೆಗೆ ಮಂಜೂರಾತಿ ನೀಡಿ ಕೆಲಸವನ್ನು ಪ್ರಾರಂಭಿಸಲಾಗುವುದು.

ಶ್ರೀ ಇ. ಮಾರುತಿ ರಾವ್ ಪವಾರ:- ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ನಕ್ಷೆ ಮತ್ತು ಅಂದಾಜುಗಳ ಪಟ್ಟಿಯನ್ನು ಮೈಸೂರು ನಗರದ ಕಛೇರಿಯಿಂದ ಬಂದಿದೆ ಎನ್ನುವಂಥ ವಿಚಾರವನ್ನು ತಿಳಿಸಿದ್ದಾರೆ. ಆದರೆ ಮತ್ತೆ ಇದನ್ನು ಆಯವ್ಯಯದಲ್ಲಿ 1998-99ರಲ್ಲಿ ಸೇರಿಸುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಆದರೆ ಈಗಾಗಲೇ ಸಪ್ಲಿಮೆಂಟರಿ ಬಡ್ಜೆಟ್‌ನಲ್ಲಿ ಕಳೆದ ಎರಡು ತಿಂಗಳ ಹಿಂದೆ (24ನೇ ತಾರೀಖಿನಿಂದ) ಈಗಾಗಲೇ ಇದಕ್ಕೆ ಒಪ್ಪಿಗೆ ದೊರೆತಿದೆ. ಆದರೆ ಇದನ್ನು ಇನ್ನೊಂದು ಸಲ ಆಯವ್ಯಯದಲ್ಲಿ ಸೇರಿಸಿರುತ್ತೇವೆ ಎನ್ನುವುಂಥದ್ದು ಉತ್ತರ ತಪ್ಪು ಬಂದಿದೆ. ದಯಮಾಡಿ ತಕ್ಷಣದಲ್ಲಿ ಆ ಒಂದು ಟೆಂಡರ್ ಕರೆದು ಅಲ್ಲಿ ಬಸ್ ನಿಲ್ದಾಣ ಪ್ರಾರಂಭ ಮಾಡುವುದಕ್ಕೆ ಯಾವಾಗ ಕಾಮಗಾರಿ ಪ್ರಾರಂಭ ಮಾಡುತ್ತೀರಾ ಎನ್ನುವ ಬಗ್ಗೆ ಖಚಿತವಾದ ಉತ್ತರ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ (ಸಾರಿಗೆ ಸಚಿವರ ಪರವಾಗಿ):- ಮಾನ್ಯ ಅಧ್ಯಕ್ಷರೇ, 1998-99ನೇ ಸಾಲಿಗೆ ಈ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ನಾವು ತೀರ್ಮಾನ ಮಾಡಿದ್ದೇವೆ. ಆದರೆ ಮುಂದೆ ಇರತಕ್ಕಂಥ ಆಡಳಿತ ಸಭೆಯಲ್ಲಿ ಇದಕ್ಕೆ ಒಪ್ಪಿಗೆ ಕೊಟ್ಟು ಈ ಕಾಮಗಾರಿಯನ್ನು 1998-99ನೇ ಸಾಲಿಗೆ ಪ್ರಾರಂಭ ಮಾಡುತ್ತೇವೆ.

ಶಿಗ್ಗಾಂವ ಬಸ್ ನಿಲ್ದಾಣ ಕಟ್ಟಡ

68(258) ಶ್ರೀಮಂಜುನಾಥ ಸಿ. ಕುನ್ನೂರ್ (ಶಿಗ್ಗಾಂವ) : ಮಾನ್ಯ ಸಾರಿಗೆ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಿಗ್ಗಾಂವ ಬಸ್ ನಿಲ್ದಾಣ ನಿರ್ಮಾಣ ಹಾಗೂ ಸವಣೂರು ಬಸ್ ಡಿಪೋ ಸವಣೂರು ಬಸ್ ಡಿಪೋ ಕಟ್ಟಡಗಳ ಕಾಮಗಾರಿಗಳು ಯಾವ ಹಂತದಲ್ಲಿವೆ?

ಆ) ಶಿಗ್ಗಾಂವ್ ಬಸ್ ನಿಲ್ದಾಣ ಕಟ್ಟಡ ನಿರ್ಮಾಣ: ಕಾರ್ಯ ವಿಳಂಬವಾಗಿರಲು ಕಾರಣವೇನು? ಸದರಿ ಕಾಮಗಾರಿ ಇನ್ನೂ ಎಷ್ಟು ದಿವಸಗಳಲ್ಲಿ ಮುಗಿಸಲಾಗುವುದು?

ಇ) ಸವಣೂರು ಬಸ್ ಡಿಪೋ ನಿರ್ಮಾಣಕ್ಕೆ: ಎಷ್ಟು ಎಕರೆ ಜಮೀನು ಕಬ್‌ಜಾ ಪಡೆಯಲಾಗಿದೆ?

ಈ) ಸದರೀ ಕೆಲಸಕ್ಕೆ ಎಷ್ಟು ಹಣ ಪ್ರಸ್ತುತ: ಆಯವ್ಯಯದಲ್ಲಿ ಒದಗಿಸಲಾಗಿದೆ?

ಉ) ಸದರಿ ಡಿಪೋ ನಿರ್ಮಾಣಕ್ಕೆ ಕಾರ್ಯ ಯಾವಾಗ ಮುಗಿಸಲಾಗುವುದು ?

ಶ್ರೀ ಪಿ.ಜಿ.ಆರ್ ಸಿಂಧ್ಯ (ಸಾರಿಗೆ ಸಚಿವರು) :

ಆ) ಶಿಗ್ಗಾಂವ ಬಸ್ ನಿಲ್ದಾಣದ ಮುಖ್ಯ ಕಟ್ಟಡ ನಿರ್ಮಾಣವು ಛಾವಣಿ ಮಟ್ಟಕ್ಕೆ ಬಂದಿರುತ್ತದೆ. ಸುತ್ತು ಗೋಡೆ ನಿರ್ಮಾಣವು ಪೂರ್ಣಗೊಂಡಿರುತ್ತದೆ. ಸೆಪ್ಟಿಕ್ ಟ್ಯಾಂಕ್ ನಿರ್ಮಾಣವು ಪೂರ್ಣಗೊಳ್ಳುವ ಹಂತದಲ್ಲಿದೆ. ಕವರ್ಡ್ ಅಕಾಮಡೇಷನ್ ನಿರ್ಮಾಣವು ಪ್ರಗತಿಯಲ್ಲಿರುತ್ತದೆ.

ಸವಣೂರು ಬಸ್ ಡಿಪೋ ನಿವೇಶನದ ಬಗ್ಗೆ ತಕರಾರು ಇರುವುದರಿಂದ ನಿರ್ಮಾಣ ಕಾರ್ಯವನ್ನು ಇನ್ನೂ ಕೈಗೊಂಡಿರುವುದಿಲ್ಲ.

ಆ) ನಿವೇಶನದ ಗಡಿ ಗುರುತು ಇತ್ಯರ್ಥ ಆಗುವಲ್ಲಿ ಕಂದಾಯ ಇಲಾಖೆಯಿಂದ ಆದ ವಿಳಂಬ ಮತ್ತು ಆವರಣದ ಒಳಗೆ ಮಳೆ ನೀರು ತುಂಬಿದ್ದರಿಂದ ನಿರ್ಮಾಣ ಕಾರ್ಯ ವಿಳಂಬ ಆಗಿರುತ್ತದೆ. ಸದರಿ ಕಾಮಗಾರಿಯನ್ನು ಇನ್ನು 3 ತಿಂಗಳ ಒಳಗಾಗಿ ಪೂರ್ಣಗೋಳಿಸಲಾಗುವುದು.

ಇ) ಸವಣೂರು ಬಸ್ ಡಿಪೋ ನಿರ್ಮಾಣಕ್ಕೆ 12 ಎಕರೆ 3 ಗಂಟೆ ಜಮೀನನ್ನು ಕಬ್‌ಜಾ ಪಡೆಯಲಾಗಿದೆ.

ಈ) 1997-98 ನೇ ಸಾಲಿನಲ್ಲಿ ಪರಿಷ್ಕೃತ ಆಯವ್ಯಯದಲ್ಲಿ 75 ಲಕ್ಷ ರೂಗಳನ್ನು ಒದಗಿಸಲಾಗಿದೆ.

ಉ) ಜಮೀನಿನ ಬಗ್ಗೆ ತಕರಾರು ಇರುವುದರಿಂದ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿಲ್ಲ. ತಕರಾರು ಇತ್ಯರ್ಥ ಆದ ನಂತರ ನಿರ್ಮಾಣ ಕಾರ್ಯವನ್ನು ಕೈಗೆತ್ತಿ ಕೊಂಡು 2 ವರ್ಷಗಳ ಅವಧಿಯಲ್ಲಿ ಪೂರ್ಣ ಗೊಳಿಸಲಾಗುವುದು.

ಶ್ರೀ ಮಂಜುನಾಥ ಸಿ. ಕುನ್ನೂರ್:- ಮಾನ್ಯ ಅಧ್ಯಕ್ಷರೆ, ಶಿಗ್ಗಾಂವ್ ಬಸ್ ನಿಲ್ದಾಣ ಮುಖ್ಯ ಕಟ್ಟಡದ ನಿರ್ಮಾಣವು ಛಾವಣಿ ಮಟ್ಟಕ್ಕೆ ಬಂದಿರುತ್ತದೆ, ಮತ್ತು ಆ ಕೆಲಸವನ್ನು ಮೂರು ತಿಂಗಳೊಳಗಾಗಿ ಮುಗಿಸುತ್ತೇವೆಂದು ಉತ್ತರವನ್ನು ಕೊಟ್ಟಿದ್ದಾರೆ. ಕಳೆದ ಮೂರು ವರ್ಷಗಳಿಂದ ಆ ಕೆಲಸ ನಡೆಯುತ್ತಿದೆ. ಯಾವ ಮಟ್ಟದಲ್ಲಿ ಈ ಕೆಲಸ ನಡೆಯಬೇಕಾಗಿತ್ತು ಅದು ಆ ಮಟ್ಟದಲ್ಲಿ ನಡೆಯುತ್ತಿಲ್ಲ. ಈ ಟೆಂಡರ್ ಆದಾಗ ಕೂಡ ಡಿಸೆಂಬರ್ ತಿಂಗಳೊಳಗೆ ಮುಗಿಸಬೇಕೆಂದು ಆಗಿತ್ತು ಆದಗ್ಯೂ ಕೂಡ ಮುಗಿಸಿಲ್ಲ. ದಯವಿಟ್ಟು ತಾವು ಉತ್ತರವನ್ನು ಕೊಟ್ಟಂತೆ ಬೇಗನೆ ಈ ಬಸ್ ನಿಲ್ದಾಣದ ಕಾಮಗಾರಿಯನ್ನು ಮುಗಿಸಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಸವಣೂರು ಬಸ್ ಡಿಪೋ ಕಟ್ಟಡ ಸಲುವಾಗಿ 1997-98ರಲ್ಲಿ ಒಟ್ಟು 75 ಲಕ್ಷ ರೂಪಾಯಿಗಳನ್ನು ನಿಗದಿ ಮಾಡಿದ್ದೀರಿ. ಆದರೆ ಇದಕ್ಕೆ 13 ಎಕರೆ 12 ಗುಂಟೆ ಜಮೀನು ಕಬ್ಜಾ ಪಡೆದಿದ್ದೇವೆಂದು ಉತ್ತರವನ್ನೂ ಕೂಡ ಕೊಟ್ಟಿದ್ದೀರಿ. ಅಲ್ಲಿ ಒಂದು ನ್ಯಾಯ ಇದೆ. ಅದು ಇತ್ಯರ್ಥವಾಗಬೇಕೆಂದು ಕೂಡ ಹೇಳಿದ್ದೀರಿ. ಆ ನ್ಯಾಯ

ಇದ್ದುದರಿಂದ ಅಲ್ಲಿ ಒಬ್ಬ ಸ್ಟ್ರೆಂಜರ್ ಕೇಸ್ ಫೈಲ್ ಮಾಡಿರುವುದರಿಂದ, ನಗರದ ಹೃದಯ ಭಾಗದಲ್ಲಿರುವ ಆ ಜಮೀನು ಇರುವುದರಿಂದ ಅವರು ಮಾಲೀಕರೆಂದು ಕೋರ್ಟಿನಲ್ಲಿ ಸಾಬೀತು ಆದರೆ ಅದಕ್ಕೆ ಪರಿಹಾರ ಧನವನ್ನು ಪಡೆಯಬಹುದು. ತಾವು ಈಗಾಗಲೇ 7 ಕೋಟಿ ರೂಪಾಯಿಗಳನ್ನು ತುಂಬಿ 12 ಎಕರೆ 13 ಗುಂಟೆ ಜಮೀನನ್ನು ಕಬ್ಜಾ ಪಡೆದುಕೊಂಡಿದ್ದೀರಿ. ದಯಮಾಡಿ ಈ ಕಾರಣವನ್ನು ಮೇಲಿಂದ ಮೇಲೆ ಹೇಳದೆ ಕೂಡಲೇ ಬಸ್ ಡಿಪೋವನ್ನು ಪ್ರಾರಂಭ ಮಾಡಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀಂ ಎಂ.ಸಿ. ನಾಣಯ್ಯ (ಸಾರಿಗೆ ಸಚಿವರ ಪರವಾಗಿ) :- ಮಾನ್ಯ ಅಧ್ಯಕ್ಷರೇ, ನಾವು ಈಗಾಗಲೇ ಹೇಳಿದ್ದೇವೆ, ಇನ್ನು ಮೂರು ತಿಂಗಳಲ್ಲಿ ಶಿಗ್ಗಾಂವ್ ಬಸ್ ನಿಲ್ದಾಣದ ಕೆಲಸವನ್ನು ನಾವು ಮುಗಿಸುತ್ತೇವೆ. ಅಲ್ಲಿ ಈಗಾಗಲೇ ಕೆಲಸ ಪ್ರಾರಂಭವಾಗಿದೆ, ಕೆಲವು ಚಾವಣಿ ಹಂತಕ್ಕೆ ಬಂದಿದೆ. ನಾವು ಹೇಳಿದ ಹಾಗೆ ಮೂರು ತಿಂಗಳಲ್ಲಿ ಆ ಕೆಲಸವನ್ನು ಮುಗಿಸುತ್ತೇವೆ. ಸವಣೂರಿಗೆ ಸಂಬಂಧಪಟ್ಟಂತೆ ಬಸ್ ಡಿಪೋ ಸಲುವಾಗಿ 12 ಎಕರೆ ಜಮೀನನ್ನು ವಶಪಡಿಸಿ ಕೊಂಡಿದ್ದೇವೆ. ಪ್ರಿನ್ಸ್‌ಲಿಸ್ಟ್‌ನೆಟ್ ಆಗಿದ್ದ ಸಂದರ್ಭದಲ್ಲಿ ತಾವು ಇದರೆ ಉತ್ತರಾಧಿಕಾರಿ ಎಂದು ಕೋರ್ಟಿಗೆ ಹೋಗಿ ಸ್ಟೇ ತಂದಿದ್ದಾರೆ. ಯಥಾಸ್ಥಿತಿ ಇದನ್ನು ಮೇನ್‌ಟೇನ್ ಮಾಡಿಕೊಂಡು ಹೋಗಬೇಕೆಂದು ಹೇಳಿದ್ದಾರೆ. ನಾನು ಈಗಾಗಲೇ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇನೆ. ಇವತ್ತು ಸ್ಟೇ ಕೊಟ್ಟಿದ್ದಾರೆ ಅದನ್ನು ವೆಕೇಟ್ ಮಾಡುವುದಕ್ಕೆ ಕ್ರಮ ಕೈಗೊಳ್ಳುತ್ತೇವೆ. ಈ ಕ್ರಮವನ್ನು ಕೈಗೊಳ್ಳುವುದಕ್ಕೆ ನಾನು ಸೂಚನೆ ಕೊಟ್ಟಿದ್ದೇನೆ.

ಮಡಿಕೇರಿ ತಾಲ್ಲೂಕಿನಲ್ಲಿ ಆಶ್ರಯ ಯೋಜನೆ ಯಲ್ಲಿ ಹಣ ದುರುಪಯೋಗ

69 (248) ಶ್ರೀ ಡಿ.ಎಸ್. ಮಾದಪ್ಪ (ಮಡಿಕೇರಿ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) 1993-94, 1994-95 1995-96ನೇ ಸಾಲಿನಲ್ಲಿ ಮಡಿಕೇರಿ ತಾಲ್ಲೂಕಿನಲ್ಲಿ ಆಶ್ರಯ ಯೋಜನೆಗೆ ಬಿಡುಗಡೆ ಮಾಡಲಾದ ಹಣ ಎಷ್ಟು?

ಆ) ಈ ಅವಧಿಯಲ್ಲಿ ಆಶ್ರಯ ಯೋಜನೆಯಲ್ಲಿ ಹಣ ದುರುಪಯೋಗವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಈ ಬಗ್ಗೆ ತನಿಖೆ ನಡೆಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್. ಡಿ. ರೇವಣ್ಣ (ವಸತಿ ಸಚಿವರು) :

ಅ)

1993-94	94-95	95-96
57.780	22.00	37.0

(ರೂ. ಲಕ್ಷಗಳಲ್ಲಿ)

ಆ) ಇನ್ನೂ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ

ಇ) - ಉದ್ಭವಿಸುವುದಿಲ್ಲ-